# ವಿಶೇಷಗಳ ವೈವಿಧ್ಯತೆಗಳುಳ್ಳ ವೀಳ್ಯದೆಲೆ

ಭಾಗ 1

ಭಾರತೀಯ ಸಂಸ್ಕೃತಿಯು ಆಚರಣೆಗಳ ಆಗರ. ವೈಜ್ಞಾನಿಕ, ವೈದ್ಯಕೀಯ, ವೈಚಾರಿಕ ಅಂಶಗಳಿಗೆ ಭಾರತೀಯ ಸಂಸ್ಕೃತಿಯಲ್ಲಿ ಆಚರಣೆಯ ಲೇಪ ಕೊಡಲಾಗಿದೆ. ಅದು ದೈನಂದಿನ ಚರ್ಯೆಯಾಗಿರಬಹುದು, ಧಾರ್ಮಿಕ ಆಚರಣೆಗಳಾಗಿರಬಹುದು, ಹಬ್ಬ-ಉತ್ಸವಗಳಾಗಿರಬಹುದು, ಪೂಜೆ-ವ್ರತಗಳಾಗಿರಬಹುದು; ಹೀಗೆ ಪ್ರತಿಯೊಂದು ಆಚರಣೆಯೂ ಕೂಡ ವಿಚಾರಗಳನ್ನಾಧರಿಸಿ ರೂಢಿಗೆ ಬಂದಂತಹದ್ದು. ವಿಪರ್ಯಾಸವೆಂದರೆ ಇಂದಿನ ದಿನಗಳಲ್ಲಿ ವಿಚಾರ/ತತ್ವಜ್ಞಾನಗಳನ್ನು ಮರೆತು ಆಚರಣೆಗಳನ್ನು ವೈಭವೀಕರಿಸಲಾಗುತ್ತಿದೆ. ಆಚರಣೆಯ ಹಿಂದಿನ ವಿಚಾರವನ್ನರಿತು ಪಾಲಿಸಿದಾಗ ಜೀವನಕ್ಕೊಂದು ಸಾರ್ಥಕ್ಯ ಭಾವ. ಇಂತಹ ವಿಚಾರಾಧಾರಿತ ಆಚರಣೆಗಳಲ್ಲಿ ವೀಳ್ಯದೆಲೆ-ಅಡಿಕೆಯ ಬಳಕೆಯೂ ಒಂದು. ಎಲೆ-ಅಡಿಕೆಯಿಲ್ಲದ ಪೂಜೆಯಿಲ್ಲ, ದಾನಕ್ಕೂ ಬೇಕು ಎಲೆ-ಅಡಿಕೆ. ಎಲೆ ಅಡಿಕೆಯ ಸೇವನೆ ಆರೋಗ್ಯಕ್ಕೆ ಅತ್ಯಗತ್ಯ. ಇಂತಹ ಸಕಲ ಫಲದಾಯಿ ವೀಳ್ಯದೆಲೆಯ ಮೇಲೆ ಬೆಳಕ ಚೆಲ್ಲುವ ಪ್ರಯತ್ನ ಈ ಲೇಖನ.

**ಸಾಮಾನ್ಯ ಮಾಹಿತಿ:**

ಭಾರತೀಯ ಜೀವನ ಶಾಸ್ತ್ರ-ವೈದ್ಯ ಶಾಸ್ತ್ರ ಆಯುರ್ವೇದದಲ್ಲಿ, ವೀಳ್ಯದೆಲೆಗೆ ತಾಂಬೂಲ ಎಂಬ ಹೆಸರಿದೆ. ಕನ್ನಡದಲ್ಲಿ ಎಲೆ, ವೀಳ್ಯದೆಲೆ ಎಂಬ ಹೆಸರಿಂದಲೂ ಹಿಂದಿಯಲ್ಲಿ ಪಾನ್ ಎಂಬ ಹೆಸರಿಂದಲೂ, ಆಂಗ್ಲಭಾಷೆಯಲ್ಲಿ ಬೆಟೆಲ್ ಲೀಫ್ ಎಂಬ ಹೆಸರಿಂದಲೂ ಇದು ಪ್ರಸಿದ್ಧ. ಇದರ ವೈಜ್ಞಾನಿಕ ಹೆಸರು ? ಪೈಪರ್ ಬೆಟೆಲ್. ವೀಳ್ಯದೆಲೆಯ ಕುಲ - ಪೈಪರೇಸಿ. ಲಭ್ಯಸ್ಥಾನ- ಭಾರತದ ಎಲ್ಲೆಡೆ ಇದು ಲಭ್ಯ. ನೀರು ಹೆಚ್ಚಿರುವ ಸ್ಥಳದಲ್ಲಿ ಹೇರಳವಾಗಿ ಲಭಿಸುತ್ತದೆ.

**ಸಸ್ಯದ ವಿವರಣೆ:**

ಇದೊಂದು ಬಳ್ಳಿ, ಇದರ ಮೂಲ ಮಲಯ್ಕಾಂಡ. ಸಾಮಾನ್ಯವಾಗಿ ತೆಂಗು-ಅಡಿಕೆ ಮರಗಳನ್ನು ಆಧರಿಸಿ ಬೆಳೆಯುವಂತಹ ಬಳ್ಳಿ ಇದು. ಇದು ಬೆಳೆಯಲು ನೀರು ಅತ್ಯಗತ್ಯ. ಅತಿ ಹೆಚ್ಚಿನ ಬಿಸಿಲೂ ಕೂಡ ವೀಳ್ಯದೆಲೆಯ ಬೆಳವಣಿಗೆಗೆ ಹಿತವಲ್ಲ. ಕಡು ಹಸಿರು, ತಿಳಿಹಸಿರು ವರ್ಣದ ಹೃದಯಾಕಾರದ ಎಲೆಗಳನ್ನು ಹೊಂದಿರುತ್ತದೆ. ಮೃದುವಾದ ಕಾಂಡವನ್ನು ಹೊಂದಿರುವ ಎಲೆ ಬಳ್ಳಿಯು ಅಲ್ಲಲ್ಲಿ ಬೇರುಗಳ ಆಧಾರದಿಂದ ಮರವನ್ನು ಬಳಸಿಕೊಳ್ಳುತ್ತಾ ಬೆಳೆಯುತ್ತದೆ.

**ಪರ್ಯಾಯ ಪದಗಳು:**

ವೇದಾಧಾರಿತ ಎಲ್ಲಾ ಭಾರತೀಯ ವಿಜ್ಞಾನ ಪ್ರಕಾರಗಳಲ್ಲಿ ಪರ್ಯಾಯ ಪದಗಳಿಗೆ ಹೆಚ್ಚಿನ ಪ್ರಾಶಸ್ತ್ಯ. ಅಂತೆಯೇ ವೀಳ್ಯದೆಲೆಗೂ ಕೆಲವು ಪರ್ಯಾಯಗಳು ಕೊಡಲ್ಪಟ್ಟಿವೆ. ಅವು ಇಂತಿವೆ;

* ತಾಂಬೂಲವಲ್ಲಿ- ಯಾವುದು ನೀರಿನ ಸೆಲೆಯಲ್ಲಿ ಬೆಳೆಯುತ್ತದೆಯೋ, ಉಳಿಯುತ್ತದೆಯೋ ಅದೇ ತಾಂಬೂಲವಲ್ಲಿ.
* ನಾಗವಲ್ಲಿ- ನಾಗಲೋಕದಿಂದ ಭೂಲೋಕಕ್ಕೆ ಬಂದಂತಹ ಬಳ್ಳಿ.

ಉಪಯೋಗಿಸುವಂತಹ ಸಸ್ಯದ ಭಾಗ: ಎಲೆ



**ಆಹಾರ ಮಂಜೂಷ**

ಆಯುರ್ವೇದೀಯ ಆಹಾರ | ಆರೋಗ್ಯಕ್ಕಾಗಿ ಆಹಾರ

ಡಾ. ಚಿತ್ರಲೇಖಾ ವಿ. ಕೃಷ್ಣ M.D.(Ayu)
ಸ್ತ್ರೀ ಆರೋಗ್ಯ ತಜ್ಞೆ
ಶ್ರೀ ಸದ್ಗುರು ಚಿಕಿತ್ಸಾಲಯ
Ph- 9980212024



**ಪೌರಾಣಿಕ ಹಿನ್ನೆಲೆ:**

ಅಮೃತ ಮಥನದ ಕಥೆ ಎಲ್ಲರಿಗೂ ತಿಳಿದದ್ದೆ. ಅಮೃತ ಮಥನಾನಂತರ ಶ್ರೀಮನ್ನಾರಾಯಣನು ಮೋಹಿನಿ ರೂಪಧಾರಿಯಾಗಿ ಬಂದು ದೇವತೆಗಳಿಗೆ ಅಮೃತವನ್ನು ಹಂಚಿ, ಉಳಿದ ಅಮೃತವನ್ನು ಕಲಶದಲ್ಲಿಟ್ಟು ಇಂದ್ರನ ಬಳಿ ಕಾಯ್ದಿರಿಸಲು ಕೊಡುತ್ತಾನೆ. ಕಲಶವಿಟ್ಟ ಸ್ಥಳದಿಂದ ಒಂದು ಸಸ್ಯ ಉದ್ಭವಿಸುತ್ತದೆ. ಅದು ವೀಳ್ಯದೆಲೆ ಎಂಬುದಾಗಿ ವೈದ್ಯದೇವ ಧನ್ವಂತರಿಯು ಗುರುತಿಸುತ್ತಾನೆ.

ವೀಳ್ಯದೆಲೆ-ಅಡಿಕೆಯನ್ನು ಕೊಡುವ ತೆಗೆದುಕೊಳ್ಳುವ ಸಂಪ್ರದಾಯ ರೂಢಿಯಲ್ಲಿದೆ. ಎಲೆಯು ವಿಷ್ಣುವಿನ ಪ್ರತೀಕ, ಅಡಿಕೆಯು ಬ್ರಹ್ಮನ ಪ್ರತೀಕ ಹಾಗೂ ಸುಣ್ಣವು ಶಿವನ ದ್ಯೋತಕವೆಂದು ಪೂರ್ವಿಕರು ಹೇಳುತ್ತಾರೆ. ವಿಯಟ್ನಾಂನಂತಹ ದೇಶದಲ್ಲೂ ಕೂಡ ಎಲೆ-ಅಡಿಕೆ ಕೊಡುವ ವಿಧಾನ ರೂಢಿಯಲ್ಲಿದೆ. ಎಲೆಯೆಂಬುದು ಪ್ರೀತಿ ಹಾಗೂ ಅಡಿಕೆಯೆಂಬುದು ವಿವಾಹದ ದ್ಯೋತಕವೆಂಬುದು ಅಲ್ಲಿಯ ನಂಬಿಕೆ.



**ತಾಂಬೂಲದ ಭೇದಗಳು:**

ಆಯುರ್ವೇದ ಗ್ರಂಥವಾದ ಧನ್ವಂತರಿ ನಿಘಂಟುವಿನ ಪ್ರಕಾರ ವೀಳ್ಯದೆಲೆಯಲ್ಲಿ 2 ವಿಧ. 1. ಶ್ವೇತ ವರ್ಣದ ತಾಂಬೂಲ 2. ಕಡು ವರ್ಣದ ತಾಂಬೂಲ. ರಾಜನಿಘಂಟು ಗ್ರಂಥದ ಪ್ರಕಾರ ತಾಂಬೂಲದಲ್ಲಿ 7 ವಿಧ. ಅವುಗಳೆಂದರೆ, ಶ್ರೀವಾಟೀ, ಅಮ್ಲ ವಾಟೀ, ಸಟಸಾ, ಗುಹಾಗರೆ, ಅಮ್ಲಸರಾ, ಪಟುಲಿಕಾ ಹಾಗೂ ಹ್ವೇಸನಿಯಾ. ಇವುಗಳಲ್ಲಿ ಗುಹಾಗರೆ ಹಾಗೂ ಅಮ್ಲಸರಾ ಎಂಬ ಭೇದಗಳು ಸುಗಂಧ ತವಾದವುಗಳು. ಮಾಲವ ದೇಶದಲ್ಲಿ ಅಮ್ಲಸರಾ ಎಂಬ ಭೇದ ಲಭ್ಯವಾಗುತ್ತದೆ. ಪಟುಲಿಕಾ ಎಂಬ ಭೇದವು ಆಂಧ್ರದಲ್ಲಿ ಸಿಗುತ್ತದೆ. ಸಮುದ್ರ ತಟದಲ್ಲಿ ಹ್ವೇಸನಿಯಾ ಎಂಬ ಭೇದವು ಸಿಗುತ್ತದೆ.

(ಮುಂದುವರೆಯುತ್ತದೆ)

■ ಸಂಗ್ರಹ-ಸಹಕಾರ: ಡಾ. ಶ್ರೀವತ್ಸ